

## ರಾಜಹಂಸಗಳ ತಾಣ

ಬಿಸಿಲೂರು ಎಂತಲೇ ಕರೆಯುವ ರಾಯಚೂರು ಹತ್ತು ಹಲವು ಕೌತುಕಗಳನ್ನು, ವಿಶೇಷತೆಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತಿದೆ. ಭೌಗೋಳಿಕವಾಗಿ ಸಮೃದ್ಧವಾದ ಪ್ರದೇಶ. ರಾಯಚೂರಿನಿಂದ ಕೇವಲ ಐದಾರು ಕಿ.ಮೀ ದೂರದಲ್ಲಿ ಇರುವ ಮನ್ಸಲಾಪುರ ಗ್ರಾಮದಲ್ಲಿರುವ ವಿಶಾಲವಾದ ಕೆರೆ ಕಣ್ಮನ ಸೆಳೆಯುತ್ತದೆ. ಈ ಕೆರೆಯಲ್ಲಿ ಕಂಡುಬರುವ ವಿವಿಧ ಪಕ್ಷಿಗಳನ್ನು ನೋಡಲು ಎರಡು ಕಂಗಳು ಸಾಲವು. ಬಣ್ಣ ಬಣ್ಣದ ಪಕ್ಷಿಗಳು ಬಾನಲ್ಲಿ ಹಾರಾಡುತ್ತಿರುತ್ತವೆ. ವಿಶೇಷವಾಗಿ ಫ್ಲೆಮಿಂಗೊ ಅಂದರೆ ರಾಜಹಂಸ ಪಕ್ಷಿಗಳು ಇಲ್ಲಿ ಅತಿಹೆಚ್ಚಾಗಿ ಕಂಡುಬರುತ್ತವೆ.

ಇದರ ಜೊತೆ ಸ್ಪೂನ್‌ಬಿಲ್, ಪೆರಿಗ್ರಿನ್ ಫಾಲ್ಕನ್, ಸ್ಪಾಟೆಡ್ ಈಗಲ್, ಕೊಕ್ಕರೆ, ರೆಡ್ ಮುನಿಯ, ಗ್ಯಾಡ್ವಾಲ್ಸ್, ಪುಡೆಂಡ್, ಸ್ಟೋಕ್, ಒಪನ್ ಬಿಟ್ ಸ್ಟೋಕ್, ಮೆಡ್ರಿಸ್, ಪಿಂಚರ್ ಜಾತಿಯ ಪಕ್ಷಿಗಳೂ ಇವೆ. ಮುಖ್ಯವಾಗಿ ಈ ಕೆರೆಗೆ ವಿದೇಶದಿಂದ ಸಾವಿರಾರು ಪಕ್ಷಿಗಳು ಸಂತಾನೋತ್ಪತ್ತಿಗಾಗಿ ವಲಸೆ ಬರುತ್ತವೆ. ಇದರಿಂದ ಮನ್ಸಲಾಪುರ ಕೆರೆ ಪಕ್ಷಿಧಾಮವಂತೆ ಕಂಡುಬರುವುದು.

—ಈರಣ್ಣ ಬೆಂಗಾಲಿ, ರಾಯಚೂರು



## ಸೇವಂತಿಗೆಯಲ್ಲ ಗುಲಾಬಿ

ಸೇವಂತಿಗೆ ಮತ್ತು ಗುಲಾಬಿ ಗಿಡಗಳ ಪರಿಚಯ ಮತ್ತು ಅವುಗಳ ವಿನ್ಯಾಸ ಬಹುತೇಕರಿಗೆ ತಿಳಿದಿರುತ್ತದೆ. ಮಲೆನಾಡಿನ ನಮ್ಮ ಮನೆಯ ಕೈ ತೋಟದಲ್ಲಿ ವಿಶೇಷ ರೀತಿಯ ಗುಲಾಬಿಯೊಂದಿದೆ. ಚಿನ್ನದ ಹಳದಿಯೊಂದಿಗೆ ಮಿರುಗುವ ಹೂಗಳು ಸೇವಂತಿಗೆಯಂತೆಯೇ ಕಾಣಿಸುತ್ತದೆ. ಆದರೂ ಅವು ಸೇವಂತಿಗೆ ಹೂಗಳಲ್ಲ. ಗುಲಾಬಿ! ಅಚ್ಚರಿಯೆನಿಸಿದರೂ ಇದು ವಾಸ್ತವ.

ರೊಸಾಸೆ (Rosaceae) ಕುಟುಂಬಕ್ಕೆ ಸೇರಿದ ಇದರ ಸಸ್ಯ ಶಾಸ್ತ್ರೀಯ ಹೆಸರು ಕೆರಿಯ ಜಪೊನಿಕ (kerria Japonica ). ಜಪಾನೀಸ್ ಕೆರಿಯ (Japanese kerria) ಜಪಾನೀಸ್ ರೋಸ್ ಎಂದೂ ಕರೆಯುತ್ತಾರೆ. ಈ ಗಿಡದ ಕಾಂಡಗಳು ತೆಳುವಾಗಿದ್ದು ಸುಮಾರು 3 ರಿಂದ 7 ಅಡಿ ಎತ್ತರದವರೆಗೆ ಪೊದೆಯಂತೆ ಬೆಳೆಯುತ್ತದೆ. ಮುಳ್ಳು ರಹಿತವಾದ ಈ ಗಿಡದ ಮೂಲ ಚೀನಾ. ಉದ್ಯಾನಗಳ ಪ್ರಮುಖ ಆಕರ್ಷಣೆಯಾಗಿ ಗಮನ ಸೆಳೆಯುತ್ತಿದೆ.

ಬೇಸಿಗೆಯಲ್ಲಿ ಗಿಡದ ತುಂಬಾ ಹೂಗಳರಳಿ ನಳನಳಿಸುವ ಇದಕ್ಕೆ ಹೆಚ್ಚು ನೀರು, ಗೊಬ್ಬರದ ಅಗತ್ಯವಿಲ್ಲ. ಮರಳು ಮಿಶ್ರಿತ ಸ್ವಲ್ಪ ನೀರು, ಪೋಷಕಾಂಶದ ಭೂಮಿಕೆಯಲ್ಲಿ ಬೆಳೆಯುವ ಇದು ಬಿರು ಬಿಸಿಲನ್ನು ತಡೆದುಕೊಳ್ಳುವ ಶಕ್ತಿಯನ್ನೂ ಹೊಂದಿಲ್ಲ.ಕಾಂಡಗಳು ಒಣಗಿ ಬೀಳುವ ಗುಣ ಹೊಂದಿದ್ದು, ಹಚ್ಚ ಹಸುರಿನ ನುಣುಪಾದ ಹಸುರೆಲೆಯಲಿ ಹಳದಿ ಹೂಗಳೊಂದಿಗಿನ ವರ್ಣ ಸಾದೃಶ್ಯ ನೋಡುಗರ ಕಂಗಳನ್ನು ತಣಿಸುತ್ತವೆ.

—ಎಸ್.ಎನ್. ಚಂದ್ರಕಲಾ ಕೊಪ್ಪ